(MR. DEPUTY SPEAKER)

Friday, the 22nd March, 1974—

(i) Appropriation Bills.

(ii) Discussion regarding the award of the Tribunal on Krishna Waters Dispute.

The Committee also recommended that the House may take up voting of Demands for grants for the year 1974-75 from 1st April 1974.

The other Bill on the Agenda can be taken up tomarrow.

Absence of Ministers from the House

ಶ್ರೀ ಕಾಗೋಡು ತಿಮ್ಮಪ್ಪ.—ಇಪತ್ತಿನ ಕಾರ್ಯಕ್ರಮದ ಪಟ್ಟಿ ಪ್ರಕಾರ ಇನ್ನೊಂದು ಮಸೂದೆಯನ್ನು ಈಗ ತೆಗೆದುಕೊಳ್ಳಬೇಕಾಗಿತ್ತು. ಸರ್ಕಾರದವರು ಕಾರ್ಯಕ್ರಮವನ್ನು ಗೊತ್ತು ಮಾಡಿದ ಪ್ರಕಾರ ಅವರು ಬರುತ್ತಿದ್ದಾರೆಯೇ ? ಮಸೂದೆಯನ್ನು ತೆಗೆದುಕೊಂಡು ಬರುವುದಕ್ಕೆ ಅವರು ಸಿದ್ಧರಾಗಿರಬೇಕು. ಕಾರ್ಯಕ್ರಮದ ಪಟ್ಟಿಯಲ್ಲಿ ಇದ್ದರೂ ಮಂತ್ರಿಗಳು ಯಾರೂ ಇಲ್ಲ. ಬೇಜವಾಬ್ದಾರಿಯಿಂದ ಈ ಕಾರ್ಯಕ್ರಮದ ಬಗ್ಗೆ ಸರ್ಕಾರದವರು ವರ್ತಿಸುತ್ತಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಅವರ ಪರವಾಗಿ ಯಾರೇ ಆಗಲೀ 6 ಗಂಟೆಯವರೆಗೆ ಕೂತಿರಬೇಕು. ಅವರ ಕೆಲಸವನ್ನು ಪೂರೈಸಬೇಕು. ಸಮಯ ಸಿಕ್ಕಿದಾಗ ಅನುಪು ಮಾಡಿಕೊಟ್ಟು, ವಿರೋಧಪಕ್ಷದವರು ಸಹಾಯ ಕೊಡುವ ದೃಷ್ಟಿಯಿಂದ ನಾವು ಮಾಡುತ್ತಿದ್ದರೆ ಅವರು ನಿರ್ಲಕ್ಷತೆಯಿಂದ ನೋಡುತ್ತಿರುವಂತೆ ಕಾಣುತ್ತಿದೆ. ಅರ್ಧಗಂಟೆಯೊಳಗೆ ಈ ಬಿಲ್ಲನ್ನು ಪೂರೈಸಬಹುದಾಗಿತ್ತು.

ಈ ಬಿಲ್ಲನ್ನು ತೆಗೆದುಕೊಳ್ಳಬೇಕೋ ಬಿಡಬೇಕೋ ಎನ್ನತಕ್ಕಂಥ ಪ್ರಶ್ನೆ ಈ ಸದನಕ್ಕೆ ಸೇರಿದ ಪ್ರಶ್ನೆ. ಕಾರ್ಯಕ್ರಮದ ಪಟ್ಟಿಯನ್ನು ನೋಡಿಕೊಂಡು ಸರ್ಕಾರ ಸಿದ್ಧವಾಗಿರಬೇಕು. ಜವಾಬ್ದಾರಿ ಮಂತ್ರಿ ಹೊಣೆಗಾರಿಕೆ ತಪ್ಪಿಸಿಕೊಳ್ಳುವುದಕ್ಕೆ ಹಾಗೆ ಬರುತ್ತಾರೆ. ಈ ಸದನವನ್ನು ನಿರ್ಲಕ್ಷದಿಂದ ಕಾಣುತ್ತಿದ್ದಾರೆಂದು ಕಾಣುತ್ತದೆ.

5-30 P. M.

MR. DEPUTY SPEAKER.—Of all the persons, I never expected hon. member Sri Kagodu Thimmappa to be so touchy about this matter I do not say that he is violent. Hon. Minister Sri K. H. Ranganath was here sitting for a very long time. He personally requested me that his business might be taked up later on. Fortunately hon. members evinced a lot of interest from both the sides and I liked it very much. I thought that I might grow wiser by the speeches made by the hon. member. The manner in which the speeches were going on, the hon. Minister must have felt that his Bill might not come up for discussion. He had some work and he had sent a word to me privately that his Bill might be taken up tomorrow. There is no desire on the part of anybody to remain absent from the House.

SRI S. BANGARAPPA.—May I know from the Hon. Chair whether the Hon. Minister for Housing has sent any written requisition to the Chair requesting that his Bill might be taken up tomorrow ? ಅಲ್ಲಜೆ.

ಮಾನ್ಯ ಸಚಿವರು ಬೆಳಗಿನಿಂದ ಸಾಯಂಕಾಲದವರೆಗೂ ಕೂತಿದ್ದಾರೆ. ಅವರಿಗೆ ತಮ್ಮ ಖಾತೆಗೆ ಸಂಬಂಧಪಟ್ಟ ವಿಷಯ ತೆಗೆದುಕೊಳ್ಳಬೇಕು ಎನ್ನುವ ಆಸೆ ಇದ್ದರೆ ಅವರು ಎಷ್ಟು ಹೊತ್ತಾದರೂ ಇಲ್ಲ ಇದ್ದೇ ಇರಬೇಕು, ಮತ್ತು ಕಾಯಬೇಕಾಗಿತ್ತು. ಈ ದೃಷ್ಟಿಯಿಂದ ನಾನು ಕೇಳುತ್ತೇನೆ.

Sri N. RACHIAH.—Sir, I shall move the Bill.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ರಾಜಯ್ಯನವರು ಇದನ್ನು ಮಂಡಿಸುವುದು ಬಹಳ ಸುಲಭವಾದ ಕೆಲಸ. ನಂತರ ಬರುವ ಚರ್ಚೆಗೆ, ಅದರ ಚರಿತ್ರೆಗೆ, ಅದರ ಜಾತಕಕ್ಕೆ ಉತ್ತರ ಕೊಡುವ ಹಾಗೆ ಇರಬೇಕು. ಈಗ ಅವರು ಮಂಡಿಸುವುದಕ್ಕೆ ಕಾರಣ ಏನು ?

Mr. DEPUTY SPEAKER.—I am not anxious that the House should be adjourned. If the hon. members were to extend the same type of co-operation on all matters, I shall be extermelly happy. I will now call upon the Hon. Minister for Social Welfare to move the Bill on behalf of the Housing Minister.

ಶ್ರೀ ಕಾಳೇಗೌಡು ತಿಮ್ಮಪ್ಪ.—ಅಜೆಂಡಾದಲ್ಲಿ ಅವರ ಇಲಾಖೆಗೆ ಸಂಬಂಧಪಟ್ಟ ವಿಷಯ ಇದ್ದರೂ ಅನಿರೀಕ್ಷಿತವಾಗಿ ಇದು ಬರದೇ ಇರಬಹುದು ಎಂದು ಹೇಳಿ ಹೋದರೆ ನಾವು ಏತಕ್ಕೆ 6 ಗಂಟೆಯವರೆಗೂ ಇಲ್ಲಿ ಇರಬೇಕು ? ನಮಗೂ ಬೇಕಾದಷ್ಟು ಕೆಲಸ ಇದ್ದರೂ ಈ ಸದನದ ಕಾರ್ಯ ಕಲಾಪಗಳು ನಡೆಸತಕ್ಕಂಥ ಸಂದರ್ಭದಲ್ಲಿ ಹೊರಗೆ ಹೋಗುವುದಕ್ಕೆ ಮನಸ್ಸು ಬರುವುದಿಲ್ಲ. ಎಲ್ಲಕ್ಕಿಂತ ಇದೇ ದೊಡ್ಡ ಕೆಲಸ ಎಂದು ತಿಳಿದುಕೊಂಡು ಕಾಯುತ್ತಾ ಇರುವಾಗ ಈವಾಗ ಈ ವಿಷಯವನ್ನು ತೆಗೆದುಕೊಳ್ಳದೇ ಇದ್ದರೆ ಹೇಗೆ ?

Mr. DEPUTY SPEAKER.—Since you have shown the anxiety, let the Bill be taken up now. The Hon. Minister Sri N. Rachiah may move the Bill on behalf of the Government.

Karnataka Housing Board (Amendment) Bill, 1974–Motion to Consider

Sri N. RACHIAH (Minister for Social Welfare and Community Development).—Sir, on behalf of the Minister for Housing, I beg to move :

> "That the Karnataka Housing Board (Amendment) Bill, 1974 be taken into consideration."

Mr. DEPUTY SPEAKER.—Motion moved :

> "That the Karnataka Housing Board (Amendment) Bill, 1974 be taken into consideration".

† ಶ್ರೀ ಎನ್. ರಾಚಯ್ಯ — ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಈ ಒಂದು ಮಸೂದೆ ವಿಚಾರದಲ್ಲಿ ನಮಗೇನೂ ಅದರ ವಿಷಯವೇ ಗೊತ್ತಿಲ್ಲ, ಅದರ ಚರಿತ್ರೆಯೇ ಗೊತ್ತಿಲ್ಲ ಎನ್ನುವ ರೀತಿಯಲ್ಲಿ ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ಈ ಹೌಸಿಂಗ್ ಬೋರ್ಡ್‌ನ ಒಂದು ಇತಿಹಾಸ ಈ ಮನೆಯ ಸದಸ್ಯರಿಗೇ ಅಲ್ಲ, ಸರ್ಕಾರಕ್ಕೆ ಅಷ್ಟೇ ಅಲ್ಲ ರಾಜ್ಯದ ಎಲ್ಲಾ ಜನತೆಗೂ ಕೂಡ ಗೊತ್ತಿದ್ದ ವಿಚಾರವೇ ಆಗಿದೆ.

ಶ್ರೀ ಕಾಳೇಗೌಡು ತಿಮ್ಮಪ್ಪ.—ಅಧ್ಯಕ್ಷರೇ, ಮಾನ್ಯ ರಾಜಯ್ಯನವರು ಈ ಮಸೂದೆಯನ್ನು ಮಂಡಿಸುತ್ತಾ ಇದ್ದಾರೆ, ನಾನು ಅವರನ್ನು ತಮ್ಮ ಮುಖಾಂತರ ಕೇಳುತ್ತೇನೆ. ಈ ಸೂಚನೆಯನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಅವರು ಅನುಮತಿಯನ್ನು ಪಡೆದಿದ್ದಾರೆಯೇ ?